# ಕೇಂದ್ರದಿಂದ ದೇಸಿ ‘ಓಎಸ್’

**ಡಿಜಿಟಲ್ ಕ್ಷೇತ್ರಕ್ಕೆ ಆದ್ಯತೆ ನೀಡಿದ್ದ ಕೇಂದ್ರ ಸರ್ಕಾರದ ಕಣ್ಣು ಈಗ ಸ್ಮಾರ್ಟ್‌ಫೋನ್‌ಗಳ ಕಾರ್ಯಾಚರಣಾ ವ್ಯವಸ್ಥೆಯತ್ತ ಹೊರಳಿದಂತಿದೆ.**




■ **ಶಶಿಕುಮಾರ್ ಸಿ.**

ಗೂಗಲ್‌ನ ಓಎಸ್ (ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ) ಮತ್ತು ಆ್ಯಪಲ್‌ನ ಐಓಎಸ್‌ಗೆ (ಐಫೋನ್ ಆಪರೇಟಿಂಗ್ ಸಿಸ್ಟಂ) ಪರ್ಯಾಯವಾಗಿ ಕೇಂದ್ರ ಸರ್ಕಾರ ತನ್ನದೇ ಆಪರೇಟಿಂಗ್ ಸಿಸ್ಟಂ (ಓಎಸ್) ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ತೊಡಗಿದ್ದು, ಇದಕ್ಕೆ ಇಂಡ್‌ಓಎಸ್ (IndOS) ಎಂದು ಹೆಸರಿಸಲಾಗಿದೆ.

ಕೇಂದ್ರ ಸರ್ಕಾರದಿಂದ ಈ ಬಗ್ಗೆ ಅಧಿಕೃತ ಮಾಹಿತಿ ಹೊರಬೀಳದಿದ್ದರೂ, ಸರ್ಕಾರದ ಉನ್ನತ ಅಧಿಕಾರಿಗಳಿಂದ ಈ ಮಾಹಿತಿ ದೊರೆತಿದೆ. ಈ ಬಗ್ಗೆ ಬಿಸಿನೆಸ್ ಸ್ಟ್ಯಾಂಡರ್ಡ್ ಪತ್ರಿಕೆಯು ವರದಿ ಮಾಡಿದ್ದು, ವರದಿಯಲ್ಲಿ ಉಲ್ಲೇಖಿಸಿರುವಂತೆ, ‘ಆ್ಯಂಡ್ರಾಯ್ಡ್ ಓಎಸ್ ಮತ್ತು ಐಓಎಸ್‌ಗಿಂತ ಹೆಚ್ಚು ಸುರಕ್ಷತಾ ಕಾರ್ಯಾಚರಣೆ ವ್ಯವಸ್ಥೆಯಿಂದ ಕೂಡಿದ ‘ಇಂಡ್‌ಓಎಸ್’ ಅಭಿವೃದ್ಧಿಪಡಿಸಲಾಗುತ್ತಿದೆ’ ಎನ್ನಲಾಗಿದೆ.

‘ಬಳಕೆದಾರರ ವೈಯಕ್ತಿಕ ಮಾಹಿತಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಆ್ಯಂಡ್ರಾಯ್ಡ್ ಓಎಸ್, ಐಓಎಸ್‌ನಲ್ಲಿ ಲಭ್ಯವಿರುವ ಫೀಚರ್ಸ್‌ಗಿಂತ ವಿಭಿನ್ನ ಆಯ್ಕೆಗಳನ್ನು ಇಂಡ್‌ಓಎಸ್‌ನಲ್ಲಿ ನೀಡಲಾಗುತ್ತದೆ’ ಎಂದು ಪತ್ರಿಕೆಗೆ ಉನ್ನತ ಅಧಿಕಾರಿಗಳು ಹೇಳಿದ್ದಾರೆ.

ದೇಸಿ ಕಾರ್ಯಾಚರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ತೊಡಗಿದ್ದು, ಇದು ಅಸ್ತಿತ್ವಕ್ಕೆ ಬಂದದ್ದೇ ಆದಲ್ಲಿ ಸದ್ಯ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ತನ್ನ ಕಬಂಧಬಾಹುಗಳನ್ನು ಚಾಚಿಕೊಂಡಿರುವ ಆ್ಯಂಡ್ರಾಯ್ಡ್ ಓಎಸ್ ಮತ್ತು ಐಓಎಸ್‌ಗೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆ ಇದೆ.

‘ಜಾಗತಿಕವಾಗಿ ಭಾರತವು ಬಹುದೊಡ್ಡ ಸ್ಮಾರ್ಟ್‌ಫೋನ್ ಮಾರುಕಟ್ಟೆಯನ್ನು ಹೊಂದಿದೆ. ನಾವು ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಭಾರತೀಯ ಮೊಬೈಲ್ ಆಪರೇಟಿಂಗ್ ಸಿಸ್ಟಂ ದೇಶದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಹೊಸಮೈಲಿಗಲ್ಲು ಸೃಷ್ಟಿಸಲಿದೆ. ಶೀಘ್ರವೇ ಇದು ಬಳಕೆಗೆ ಸಿಗಬಹುದು’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸದ್ಯ ಜಾಗತಿಕ ಮಟ್ಟದಲ್ಲಿ ಶೇ. 71.8ರಷ್ಟು, ದೇಶದ ಮಟ್ಟದಲ್ಲಿ ಶೇ. 97ರಷ್ಟು ಸ್ಮಾರ್ಟ್‌ಫೋನ್‌ಗಳನ್ನು ಆ್ಯಂಡ್ರಾಯ್ಡ್ ಓಎಸ್ ಆವರಿಸಿದ್ದರೆ ಜಾಗತಿಕ ಮಟ್ಟದಲ್ಲಿ ಶೇ. 27.6ರಷ್ಟು ಮತ್ತು ದೇಶದಲ್ಲಿ ಶೇ. 3ರಷ್ಟು ಸ್ಮಾರ್ಟ್‌ಫೋನ್‌ಗಳಲ್ಲಿ ಐಓಎಸ್ ಕಾರ್ಯನಿರ್ವಹಿಸುತ್ತಿದೆ. ಈ ಪ್ರಬಲ ಹಿಡಿತವನ್ನು ಮೆಟ್ಟಿ ‘ಇಂಡ್‌ಓಎಸ್’ ನೆಲೆಗೊಳಿಸುವ ವಿಶ್ವಾಸ ಕೇಂದ್ರ ಸರ್ಕಾರದ್ದು.

ಇಂಡ್‌ಓಎಸ್‌ಗೆ ಆ್ಯಪ್‌ಗಳನ್ನು ಇನ್‌ಬಿಲ್ಟ್ ರೂಪದಲ್ಲಿ ನೀಡುವ ಆಯ್ಕೆಯೂ ಕೇಂದ್ರ ಸರ್ಕಾರದ ಮುಂದಿದೆ. ಇದು ಸಾಧ್ಯವಾಗದಿದ್ದರೆ ಗೂಗಲ್‌ನ ಪ್ಲೇಸ್ಟೋರ್ ಅನ್ನೇ ಅವಲಂಬಿಸಬೇಕಾಗುತ್ತದೆ. ಓಎಸ್ ಜೊತೆಗೆ ಇನ್‌ಬಿಲ್ಟ್ ರೂಪದಲ್ಲಿ ಹತ್ತಾರು ಆ್ಯಪ್‌ಗಳನ್ನು ನೀಡಲಾಗುತ್ತದೆ. ಇಂಡ್‌ಓಎಸ್‌ಗೆ ಹೆಚ್ಚಿನ ಸುರಕ್ಷತೆಯನ್ನು ಒದಗಿಸುವ ನಿಟ್ಟಿನಲ್ಲಿ ಆ ಜವಾಬ್ದಾರಿಯನ್ನು ಗೂಗಲ್ ಅಥವಾ ಒಇಎಂಎಸ್‌ಗೆ ವಹಿಸುವ ಚಿಂತನೆಯೂ ಇದೆ ಎಂಬುದು ಅಧಿಕಾರಿಗಳ ಮಾತು.

ಚಿತ್ರ: ಕಾಲ್ಪನಿಕ

## ಆನ್‌ಲೈನ್ ಗೇಮಿಂಗ್‌ಗೆ ಕಡಿವಾಣ!

ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳ ಕಂಪನಿಗಳಿಗೆ ಮೂಗುದಾರ ಹಾಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಿದ್ಧತೆ ನಡೆಸಿದೆ. ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನೂತನ ಕರಡು ನಿಯಮಗಳನ್ನು ರೂಪಿಸಲು ತೊಡಗಿದ್ದು, ಇವು ಸದ್ಯ ಚಾಲ್ತಿಯಲ್ಲಿರುವ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ಕಡಿವಾಣ ಹಾಕುವ ನಿಟ್ಟಿನ ಮೊದಲ ಹೆಜ್ಜೆಯಾಗಿದೆ.

‘ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳು ಜೂಜಾಟದಂತಹ ದಂಧೆಯನ್ನು ಎಗ್ಗಿಲ್ಲದೆ ನಡೆಸುತ್ತಿದ್ದು, ಇವುಗಳಿಗೆ ಇತಿಮಿತಿ ಇಲ್ಲದಂತಾಗಿದೆ. ಕೋಟ್ಯಂತರ ಮಂದಿ ಯುವಕರು ಈ ಆ್ಯಪ್‌ಗಳಿಗೆ ದಾಸರಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ಕಡಿವಾಣ ಹಾಕಬೇಕು ಎಂಬ ಆಗ್ರಹ ದೇಶದೆಲ್ಲೆಡೆ ಕೇಳಿಬಂದಿತ್ತು.

‘ಆನ್‌ಲೈನ್ ಗೇಮಿಂಗ್ ಕಂಪನಿಗಳು ತಮ್ಮ ಆ್ಯಪ್‌ಗಳ ಬೆಟ್ಟಿಂಗ್‌ನಲ್ಲಿ ಪಾಲ್ಗೊಳ್ಳುವಂತಿಲ್ಲ ಮತ್ತು ಎಲ್ಲ ಆನ್‌ಲೈನ್ ಗೇಮಿಂಗ್ ಕಂಪನಿಗಳು ಸ್ವಯಂ ನಿಯಂತ್ರಕ ಸಂಸ್ಥೆಯಲ್ಲಿ ನೋಂದಾಯಿಸಿಕೊಳ್ಳಬೇಕು. ಗೇಮಿಂಗ್ ಕಂಪನಿಗಳ ವಿಳಾಸ ಭಾರತದಲ್ಲೂ ಇರಬೇಕು. ಸ್ವಯಂ ನಿಯಂತ್ರಣಾ ಸಂಸ್ಥೆಯಲ್ಲಿ ಆಟಗಾರರ ಪರಿಶೀಲನೆಯೂ ಆಗಬೇಕು’ ಎಂಬ ಅಂಶಗಳು ಈ ಕರಡು ನಿಯಮಗಳಲ್ಲಿ ಇದೆ ಎನ್ನಲಾಗಿದೆ.

‘ಆನ್‌ಲೈನ್ ಗೇಮಿಂಗ್ ಮಧ್ಯವರ್ತಿಗಳನ್ನು ಆಹ್ವಾನಿಸಬಹುದು. ಆದರೆ ಅವರು ಬೆಟ್ಟಿಂಗ್ ಅತಿಕ್ರಮಿಸುವಂತಿಲ್ಲ. ಒಂದು ವೇಳೆ ಅದಕ್ಕೆ ಮುಂದಾದರೆ ಅವರಿಗೆ ನೀಡಿದ ಅನುಮತಿಯನ್ನು ಹಿಂಪಡೆಯಲಾಗುವುದು. ಅನುಮತಿಯಿಲ್ಲದ ಜಾಹೀರಾತು ನೀಡದಂತೆ ಮಧ್ಯವರ್ತಿಗಳನ್ನು ತಡೆಯುವುದು ನಮ್ಮ ಉದ್ದೇಶ. ನಿಯಮಗಳು ಆನ್‌ಲೈನ್ ಗೇಮಿಂಗ್ ಉದ್ಯಮದ ಬೆಳವಣಿಗೆಯನ್ನು ಜವಾಬ್ದಾರಿಯುತ ರೀತಿಯಲ್ಲಿ ಸಕ್ರಿಯಗೊಳಿಸುವ ಗುರಿ ಹೊಂದಿವೆ. ಆನ್‌ಲೈನ್ ಗೇಮಿಂಗ್ ಸಂಬಂಧಿತ ನಿಯಮಗಳು ಫೆಬ್ರುವರಿ ಮೊದಲ ವಾರದಲ್ಲೇ ಸಿದ್ಧವಾಗುವ ಸಾಧ್ಯತೆಯಿದೆ’ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

‘ಸ್ವಯಂನಿಯಂತ್ರಕ ಸಂಸ್ಥೆಗಳನ್ನು ಸಚಿವಾಲಯದಲ್ಲಿ ನೋಂದಾಯಿಸಲಾಗುತ್ತದೆ. ಅದರ ಸದಸ್ಯರಾಗಿರುವವರು ಮತ್ತು ಕೆಲವು ಮಾನದಂಡಗಳನ್ನು ಪೂರೈಸುವವರು ಆನ್‌ಲೈನ್ ಗೇಮಿಂಗ್ ಮಧ್ಯವರ್ತಿಗಳ ಆನ್‌ಲೈನ್ ಆಟಗಳನ್ನು ನೋಂದಾಯಿಸಬಹುದು’ ಎಂದು ಸಚಿವರು ಹೇಳಿದ್ದಾರೆ.

■